# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : 541 (622) |
| ಮಾನ್ಯ ಸದಸ್ಯರ ಹೆಸರು | : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | : ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಇಲಾಖೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 20.08.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಘೋಷಣೆಯಾದ ಪ್ರತ್ಯೇಕ ಸಚಿವಾಲಯದ ಸ್ಥಾಪನೆಯು ಯಾವ ಹಂತದಲ್ಲಿದೆ; | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಘೋಷಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ:- ಸಿಆಸುಇ 436 ಸಉಸೇ 2025, ದಿನಾಂಕ:16.09.2025 ಹಾಗೂ ಸರ್ಕಾರ ಆದೇಶ ಸಂಖ್ಯೆ:ಸಿಆಸುಇ 436 ಸಉಸೇ 2025, ದಿನಾಂಕ:25.09.2025 ರನ್ವಯ ಪ್ರತ್ಯೇಕ ಸಚಿವಾಲಯ ರಚಿಸಲಾಗಿದೆ.<br><br>ಪ್ರಸ್ತುತ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯವು ಕೊಠಡಿ ಸಂಖ್ಯೆ: 757-758, 7ನೇ ಮಹಡಿ, 2ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. |
| (ಆ) | ಸಚಿವ ಸಂಪುಟದಲ್ಲಿ ನಿರ್ಧರಿಸಿ ಘೋಷಣೆಯಾಗಿ ಒಂದು ವರ್ಷವೇ ಕಳೆದರೂ ಕೂಡ ಇನ್ನು ಯಾವುದೇ ಅಧಿಕೃತ ಆದೇಶವನ್ನು ಹೊರಡಿಸದೇ ಇರಲು ಕಾರಣವೇನು; | |
| (ಇ) | ಈ ಪ್ರತ್ಯೇಕ ಸಚಿವಾಲಯವನ್ನು ಯಾವ ಹೆಸರಿನಿಂದ ಗುರುತಿಸಲು ನಿರ್ಧರಿಸಲಾಗಿದೆ; ಅಥವಾ ಯಾವ ಯಾವ ಹೆಸರುಗಳ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇವೆ; | ಈ ಪ್ರತ್ಯೇಕ ಸಚಿವಾಲಯವನ್ನು **ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯ** ಎಂಬ ಹೆಸರಿಂದ ಗುರುತಿಸಲಾಗಿದೆ. |
| (ಈ) | ಪ್ರಸ್ತುತ ರಚನೆಯಾಗಿರುವ ಸಚಿವ ಸಂಪುಟದಲ್ಲಿ ಕಲ್ಯಾಣ ಕರ್ನಾಟಕ ಪ್ರತ್ಯೇಕ ಸಚಿವಾಲಯದ ಖಾತೆಯನ್ನು ಸೇರಿಸದೇ ಇರಲು ಕಾಣವೇನು; ಯಾವ ಕಾಲಮಿತಿಯಲ್ಲಿ ಈ ಸಚಿವಾಲಯವನ್ನು ಸಂಪುಟದಲ್ಲಿ ಸೇರಿಸಿ ಖಾತೆ ಹಂಚಿಕೆಯನ್ನು ಮಾಡಲಾಗುವುದು; | ಸರ್ಕಾರದ ಆದೇಶ ಸಿಆಸುಇ 436 ಸಉಸೇ 2025, ದಿನಾಂಕ:16.09.2025 ರನ್ವಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯದ ಸಚಿವರಾಗಿರುತ್ತಾರೆ. |
| (ಉ) | ಈ ಪ್ರತ್ಯೇಕ ಸಚಿವಾಲಯಕ್ಕೆ ಮೀಸಲಿರಿಸಿರುವ ಅನುದಾನವೇಷ್ಟು; ಖರ್ಚಾದ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು; ಹಾಗೂ ಈ ಸಚಿವಾಲಯಕ್ಕೆ ಮೀಸಲಿರಿಸಿದ ಹುದ್ದೆಗಳು ಸಿಬ್ಬಂದಿ ವರ್ಗದ ಮಾಹಿತಿಯನ್ನು ಒದಗಿಸುವುದು? | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯದ ಅಧೀನದಲ್ಲಿರುವ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2026-27ನೇ ಸಾಲಿನ ಆಯವ್ಯಯ ಕಂಡಿಕೆ-287ರನ್ವಯ ರೂ.5,000/- ಕೋಟಿಗಳ ಅನುದಾನವನ್ನು ಘೋಷಿಸಲಾಗಿದೆ.<br><br>ಘನತೆವೆತ್ತ ರಾಜ್ಯಪಾಲರ ಅನುಮೋದನೆಯ ಮೇರೆಗೆ, ಸರ್ಕಾರದ ಆದೇಶ ಸಂಖ್ಯೆ: ಕೆಕೆಆರ್‌ಡಿ/ ಕೆಕೆಜಿ/26/2026, ದಿನಾಂಕ:25.06.2026ರಲ್ಲಿ 2026-27ನೇ ಸಾಲಿನ |

ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಒದಗಿಸಿರುವ ರೂ.5,000/- ಕೋಟಿಗಳ ಅನುದಾನಕ್ಕೆ ಕ್ರಿಯಾಯೋಜನೆಯನ್ನು ರೂಪಿಸಲು ಅನುಮೋದನೆ ನೀಡಲಾಗಿದೆ. ಅದರಂತೆ, ಮಂಡಳಿಯ ಕ್ರಿಯಾಯೋಜನೆ ತಯಾರಿಸುವ ಪ್ರಕ್ರಿಯೆಯು ಮಂಡಳಿಯಲ್ಲಿ ಜಾರಿಯಲ್ಲಿರುತ್ತದೆ.

ಸರ್ಕಾರ ಆದೇಶ ಸಂಖ್ಯೆ:ಸಿಆಸುಇ 436 ಸಲುಸೇ 2025, ದಿನಾಂಕ:25.09.2025 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 297 ಸಲುಸೇ 2026, ದಿನಾಂಕ: 28.07.2026 ರಲ್ಲಿ ಈ ಕೆಳಕಂಡಂತೆ 16 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯಕ್ಕೆ ಮೀಸಲಿರಿಸಲಾಗಿದೆ.

| **ಕ್ರ.ಸಂ** | **ಹುದ್ದೆಗಳ ವಿವರ** | **ಒಟ್ಟು ಹುದ್ದೆಗಳು** |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿ | 01 |
| 2. | ಸರ್ಕಾರದ ಉಪ/ ಜಂಟಿ ಕಾರ್ಯದರ್ಶಿ | 01 |
| 3. | ಸರ್ಕಾರದ ಅಧೀನ ಕಾರ್ಯದರ್ಶಿ | 01 |
| 4. | ಶಾಖಾಧಿಕಾರಿ | 02 |
| 5. | ಹಿರಿಯ ಸಹಾಯಕರು | 02 |
| 6. | ಸಹಾಯಕರು | 02 |
| 7. | ಶೀಘ್ರಲಿಪಿಗಾರರು | 01 |
| 8. | ಕಿರಿಯ ಸಹಾಯಕರು | 02 |
| 9. | ದತ್ತಾಂಶ ನಮೂದು ಸಹಾಯಕರು / ಬೆರಳಚ್ಚುಗಾರರು | 02 |
| 10. | ಗ್ರೂಪ್-ಡಿ | 02 (ಹೊರಗುತ್ತಿಗೆ) |
| | **ಒಟ್ಟು** | **16** |

**ಸಂಖ್ಯೆ: ಕಕಪ್ರಇ /11/ಕಕವಿ /2026**

**(ಬಿ. ನಾಗೇಂದ್ರ)**
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಇಲಾಖೆ ಸಚಿವರು